ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1241
2. ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಮುನಿರಾಜು ಗೌಡ ಪಿ. ಎಂ.
3. ಉತ್ತರಿಸಬೇಕಾದ ದಿನಾಂಕ : 07.03.2022
4. ಉತ್ತರಿಸಬೇಕಾದ ಸಚಿವರು : ಮಾನ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಹಾಗೂ ಪ್ರವಾಸೋದ್ಯಮ ಸಚಿವರು

ಸಂಖ್ಯೆ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಖಾಸಗಿ ಬಿಲ್ಡರ್/ಡೆವಲಪರ್ ಗಳಿಂದ ನಿರ್ಮಿಸಲಾಗುವ ವಸತಿ ಸಮುಚ್ಚಯಗಳಲ್ಲಿ ಎಷ್ಟು ಸಂಖ್ಯೆಯ ವಸತಿ ಘಟಕಗಳಿದ್ದರೆ ಅಂತಹ ವಸತಿ ಸಮುಚ್ಚಯಗಳಲ್ಲಿ ಕಡ್ಡಾಯವಾಗಿ (Sewage Treatment Plant) ಕೊಳಚೆ ನೀರು ಸಂಸ್ಕರಣ ಘಟಕಗಳನ್ನು ನಿರ್ಮಿಸಬೇಕಾಗುತ್ತದೆ.	ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 316 ಇಪಿಸಿ 2015, ದಿನಾಂಕ 19.01.2016ರ ಅನುಸಾರ 20 ಹಾಗೂ ಮೇಲ್ಪಟ್ಟ ಘಟಕಗಳಿದ್ದರೆ ಅಂತಹ ವಸತಿ ಸಮುಚ್ಚಯಗಳಲ್ಲಿ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಅಳವಡಿಸುವುದು ಕಡ್ಡಾಯವಾಗಿದೆ.
ಆ)	ಈ ನಿಯಮವು ರಾಜ್ಯಕ್ಕೆ ಅನ್ವಯಿಸುತ್ತದೆಯೇ;	ಹೌದು.
ಇ)	ಕೊಳಚೆ ನೀರು ಸಂಸ್ಕರಣ ಘಟಕವನ್ನು ಖಾಸಗಿ ವಸತಿ ಸಮುಚ್ಚಯದ ಬಿಲ್ಡರ್/ಡೆವಲಪರ್‌ಗಳಿಂದ ನಿರ್ಮಿಸಿದ ನಂತರ ಅದನ್ನು ಕಾರ್ಯಾಚರಣೆಗೆ ಒಳಪಡಿಸಲು ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ತೀರುವಳಿ ಪತ್ರ (Clearance Certificate) ಪಡೆದುಕೊಳ್ಳುವುದು ಕಡ್ಡಾಯವೇ;	ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ತ್ಯಾಜ್ಯ ಸಂಸ್ಕರಣಾ ಘಟಕಗಳ ಅಳವಡಿಕೆಗೆ ಸ್ಥಾಪನಾ ಸಮ್ಮತಿ ಪತ್ರ (Consent for Establishment) ಹಾಗೂ ಅದನ್ನು ಕಾರ್ಯಾಚರಣೆಗೆ ಒಳಪಡಿಸಲು ಚಾಲನಾ ಸಮ್ಮತಿ ಪತ್ರ (Consent for Operation) ಪಡೆಯುವುದು ಕಡ್ಡಾಯವಾಗಿರುತ್ತದೆ.
ಈ)	ಎಸ್‌ಟಿಪಿ ಘಟಕವನ್ನು ಕಾರ್ಯಾಚರಣೆಗೆ ಒಳಪಡಿಸಲು ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ತಿರುವಳಿ ಪತ್ರ ನೀಡಿದ ನಂತರದಲ್ಲಿ ಎಸ್.ಟಿ.ಪಿ. ಘಟಕವು ಸಮರ್ಪಕವಾಗಿ	ತ್ಯಾಜ್ಯ ಸಂಸ್ಕರಣಾ ಘಟಕಗಳಿಗೆ ಸಮ್ಮತಿ ಪತ್ರವನ್ನು ನೀಡಿದ ನಂತರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕಾಲಕಾಲಕ್ಕೆ ಸದರಿ ಘಟಕಗಳನ್ನು ಪರಿವೀಕ್ಷಣೆ ನಡೆಸುತ್ತದೆ.

<table>
<tr><td></td><td>ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಕಾಲಕಾಲಕ್ಕೆ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪರಿಶೀಲನೆ ನಡೆಸಲಾಗುತ್ತದೆಯೇ;</td><td></td></tr>
<tr><td>ಉ)</td><td>ಹಾಗಿದ್ದಲ್ಲಿ ಪ್ರತಿ ಘಟಕದ ಕಾರ್ಯಾಚರಣೆಯನ್ನು ಎಷ್ಟು ದಿನಗಳ ಅವಧಿಗೆ ಒಮ್ಮೆ ಪರಿಶೀಲನೆ ಮಾಡಲಾಗುತ್ತದೆ?</td><td>ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರ್ದೇಶನದಂತೆ ಕೆಳಕಂಡ ಅವಧಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಪರಿಶೀಲನೆ ನಡೆಸಲಾಗುತ್ತದೆ.
<table>
<tr><td>ಬೃಹತ್ & ಮಧ್ಯಮ ಕೆಂಪು ವರ್ಗದ ಉದ್ದಿಮೆಗಳಿಗೆ</td><td>3 ತಿಂಗಳಿಗೊಮ್ಮೆ</td></tr>
<tr><td>ಸಣ್ಣ ಕೆಂಪು ವರ್ಗದ ಉದ್ದಿಮೆಗಳಿಗೆ</td><td>1 ವರ್ಷಕ್ಕೊಮ್ಮೆ</td></tr>
<tr><td>ಬೃಹತ್ & ಮಧ್ಯಮ ಕಿತ್ತಳೆ ವರ್ಗದ ಉದ್ದಿಮೆಗಳಿಗೆ</td><td>1 ವರ್ಷಕ್ಕೊಮ್ಮೆ</td></tr>
<tr><td>ಸಣ್ಣ ಕಿತ್ತಳೆ ವರ್ಗದ ಉದ್ದಿಮೆಗಳಿಗೆ</td><td>3 ವರ್ಷಗಳಿಗೊಮ್ಮೆ</td></tr>
<tr><td>ಬೃಹತ್ & ಮಧ್ಯಮ ಹಸಿರು ವರ್ಗದ ಉದ್ದಿಮೆಗಳಿಗೆ</td><td>2 ವರ್ಷಗಳಿಗೊಮ್ಮೆ</td></tr>
<tr><td>ಸಣ್ಣ ಹಸಿರು ವರ್ಗದ ಉದ್ದಿಮೆಗಳಿಗೆ</td><td>5 ವರ್ಷಗಳಿಗೊಮ್ಮೆ</td></tr>
</table></td></tr>
</table>

ಸಂಖ್ಯೆ: ಅಪಜೀ 65 ಇಪಿಸಿ 2022

(ಆನಂದ್ ಸಿಂಗ್)
ಜೀವಿಪರಿಸ್ಥಿತಿ ಮತ್ತು ಪರಿಸರ ಹಾಗೂ
ಪ್ರವಾಸೋದ್ಯಮ ಸಚಿವರು